ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಹಿಮರಾಣಿ ಅಂಬೋಲಿ

ಆರುನೂರ ತೊಂಬತ್ತು ಮೀಟರ್ ಎತ್ತರದಲ್ಲಿರುವ ಅಂಬೋಲಿ ಗೋವಾದ ಕರಾವಳಿ ದಾಟಿಕೊಂಡು ನುಗ್ಗಿರುವ ಪಶ್ಚಿಮ ಘಟ್ಟದ ಎತ್ತರದ ಬೆಟ್ಟಗಳನ್ನು ತನ್ನ ತೋಳ ತೆಕ್ಕೆಯಲ್ಲಿ ಬಂಧಿಸಿ ಹಿಡಿದಿದೆ. ಪ್ರಪಂಚದ ಪರಿಸರ ಹಾಟ್‌ಸ್ಪಾಟ್‌ಗಳಲ್ಲಿ ಇದೂ ಒಂದೆಂದು ಖ್ಯಾತಿ ಗಳಿಸಿದೆ. ಅಸಾಮಾನ್ಯ ಸಸ್ಯ ಪ್ರಬೇಧ, ವಿಶಿಷ್ಟ ಪ್ರಾಣಿಪಕ್ಷಿ, ಸರೀಸೃಪಗಳ ತವರೂರಿದು. ಮುಖವನ್ನು ಬಲೂನಿನಂತೆ ಊದಿಸಿಕೊಂಡು ಪ್ರಣಯಗೀತೆ ಹಾಡುವ 'ಅಂಬೋಲಿ ಕಪ್ಪೆ' ಇಲ್ಲಿಯ ಪ್ರಮುಖ ಆಕರ್ಷಣೆ.

ನಾವು ಬೆಳಗಾವಿ ದಾಟುವಾಗಲೇ ರಾತ್ರಿ ಹನ್ನೆರಡು ದಾಟಿತ್ತು. ಮುಂದೆ ಕಾಡಿನ ರಸ್ತೆಗಳ ಸೀಳಿಕೊಂಡು ಬೆಟ್ಟದ ತುದಿಯ ಅಂಬೋಲಿ ಎಂಬ ಸಣ್ಣ ಊರು ಸಮೀಪಿಸಿದಾಗ ರಾತ್ರಿ ಮೂರು ಗಂಟೆ. ದಟ್ಟವಾದ ಹಿಮ ಎಲ್ಲೆಡೆ ಆವರಿಸಿಕೊಂಡು ದಾರಿಯೇ ಕಾಣುತ್ತಿರಲಿಲ್ಲ. ಹಿಂದೆ ಎಲ್ಲೆಲ್ಲೂ ಕಾಣದಿದ್ದ ಮಂಜಿನ ದಾಳಿ ಆ ಏರು ದಾರಿಯಲ್ಲಿ ತಕ್ಷಣ ಮಾಯಾವಿಯಂತೆ ಪ್ರಕಟವಾಯಿತು. ಕಾರಿನ ಬೆಳಕು ಹೊಗೆ ರೂಪದ ಬಿಳಿ ಮಂಜನ್ನು ಸೀಳಿ ಮುನ್ನುಗ್ಗದೆ ಒದ್ದಾಡುತ್ತಿತ್ತು. ಈ ಪಯಣವೇ ಒಮ್ಮೆಗೆ ಹೆದರಿಕೆ ಹುಟ್ಟಿಸಿದ್ದು ನಿಜ. ಸಣ್ಣ ಎಡವಟ್ಟು ಘಟಿಸಿದರೂ ಕಾರು ಎಲ್ಲಿ ಪ್ರಪಾತಕ್ಕೆ ಜಾರಿ ಬೀಳುವುದೋ ಎಂಬ ಜೀವಭಯವೂ ಶುರುವಾಯಿತು. ನಾನೆಲ್ಲಾದರೂ ಡ್ರೈವಿಂಗ್ ಮಾಡುತ್ತಲೇ ತೂಕಡಿಸಿ ಬಿಟ್ಟರೆ ಎಂದು ಶಶಿ ಸಿಂಗ್ ಏನೇನೋ ಮಾತಾಡುತ್ತಲೇ ಇದ್ದರು. ಈಗ ನಮ್ಮ ಮಾತುಗಳೂ ಖಾಲಿಯಾಗಿದ್ದವು. ನನ್ನನ್ನು ಎಚ್ಚರಿಸಿಡಲು ಪಣ ತೊಟ್ಟಿದ್ದ ಶಶಿ ಕೂಡ ಸಣ್ಣ ನಿದ್ರೆಗೆ ಆಗಾಗ ಜಾರುತ್ತಿದ್ದರು. ಧಡಕ್ಕನೆ ಎಚ್ಚರವಾಗಿ, 'ನಾವೆಲ್ಲಿದ್ದೇವೆ ಸರ್, ನೀವು ಆರಾಮಾಗಿದ್ದೀರಲ್ಲ?' ಎಂದು ತೊದಲಿ ಗೊಣಗುತ್ತಿದ್ದರು. ನಾನು ನಕ್ಕು ಸುಮ್ಮನಾಗುತ್ತಿದ್ದೆ. ಆಸ್ಪತ್ರೆಯಲ್ಲಿ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಶಶಿಗೆ ನಿದ್ದೆಗೆಟ್ಟು ಅಭ್ಯಾಸವಿದೆ. ಆದರೂ ದೂರದ ಪಯಣದ ಆಯಾಸ ಅವರನ್ನೂ ಬಿಟ್ಟಿರಲಿಲ್ಲ. ಹಿಂದೆ ಕೂತಿದ್ದ ಇಬ್ಬರು ಗೆಳೆಯರು ಮಾತ್ರ ಸಂಪೂರ್ಣ ನಿದ್ದೆಗೆ ಶರಣಾಗಿ ಪಾಚಿಕೊಂಡಿದ್ದರು.

ಫೋಟೊಗ್ರಫಿಗೆ ಹೊರಟಾಗ ನಮಗೆ ಹಗಲು- ರಾತ್ರಿಗಳ ಪರಿವೇ ಇರುವುದಿಲ್ಲ. ವಿಚಿತ್ರ ಹುಮ್ಮಸ್ಸು ಹುಚ್ಚೆದ್ದು ಕುಣಿಯುವ ಸಮಯ. ಎಷ್ಟೇ ಕಷ್ಟವಾದರೂ ನಾನಂತೂ ಡ್ರೈವಿಂಗ್ ಚಾನ್ಸ್ ಯಾರಿಗೂ ಬಿಟ್ಟು ಕೊಡುವ ಮಗನಲ್ಲ. ನನ್ನ ಈ ತೆವಲು ಗೆಳೆಯರಿಗೆಲ್ಲಾ ಗೊತ್ತಿರುವ ಸತ್ಯ. ಪಟ ಹಿಡಿಯುವ ಚಪಲದಷ್ಟೇ ಈ ಡ್ರೈವಿಂಗ್ ಚಟವೂ ನನಗೆ ಪುಳಕ ಕೊಡುವ ಸಂಗತಿ. ಪಯಣ ಆಯಾಸದೊಟ್ಟಿಗೆ, ನೀಡುವ ಸುಖ ಮತ್ತು ಅನುಭವ ಬದುಕಿಗೆ ತುಂಬಾ ಮುಖ್ಯ. ಪಯಣದ ಏಕತಾನತೆ ಮುರಿಯಲು ಕಾಯುತ್ತಿದ್ದಾಗ ಅಲ್ಲೇ ದಾರಿಯಲ್ಲಿ ಒಂದು ಟೀ ಅಂಗಡಿ ಕಾಣಿಸಿತು. ತಕ್ಷಣವೇ ವಾಹನ ನಿಲ್ಲಿಸಿದೆ. ಸಣ್ಣಗೆ ಮಳೆಯೂ ಸುರಿಯುತ್ತಿತ್ತು. ಗಿರಾಕಿ ಕಂಡ ಚಾ ಅಂಗಡಿಯವನು ಎದ್ದು ಕೂತ. ಕೆಳಗಿಳಿದು ನಿಂತರೆ ಕಪ್ಪೆಗಳ ಮಿತಿಮೀರಿದ ಕಿರುಚಾಟ. ಮೋಡಗಳ ಒಳಗೆ ನಾವೆಲ್ಲರೂ ಒಮ್ಮೆಗೇ ತೇಲಿ ಸಾಗಿದ ಅನುಭವ. ಅಬ್ಬಾ! ಈ